ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 162
ಉತ್ತರಿಸಬೇಕಾದ ದಿನಾಂಕ : 10.7.2018
ಸದಸ್ಯರ ಹೆಸರು : ಶ್ರೀ ಎನ್. ಅಪ್ಪಾಜಿಗೌಡ
ಉತ್ತರಿಸುವ ಸಚಿವರು : ವಸತಿ ಸಚಿವರು.

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಮಂಡ್ಯ ಜಿಲ್ಲೆಯ ವ್ಯಾಪ್ತಿಯಲ್ಲಿ ರಾಜೀವ್‌ಗಾಂಧಿ ವಸತಿ ನಿಗಮದ ವಿಶೇಷ ವರ್ಗದಡಿ (ವಿಧವಾ ಮತ್ತು ವಿಕಲಚೇತನ) ಮನೆ/ನಿವೇಶನ ಒದಗಿಸಲು ಆಯ್ಕೆಯಾದ ಫಲಾನುಭವಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು, ಗ್ರಾಮ ಪಂಚಾಯತ್‌ವಾರು ವಿವರ ನೀಡುವುದು). | ವಿಶೇಷ ವರ್ಗದ ಯೋಜನೆಯನ್ನು 2014-15ರಿಂದ ಜಾರಿಗೆ ತರಲಾಗಿದ್ದು, ದೇವರಾಜ ಅರಸು ವಸತಿ ಯೋಜನೆ ಎಂದು 2017-18ರಲ್ಲಿ ಮರುನಾಮಕರಣ ಮಾಡಲಾಗಿದೆ. ಈ ಯೋಜನೆಯಡಿ 2014-15ನೇ ಸಾಲಿನಿಂದ 2016-17ನೇ ಸಾಲಿನವರೆಗೆ ಮಂಡ್ಯ ಜಿಲ್ಲೆಯಲ್ಲಿ ಯಾವುದೇ ಮನೆಗಳಿಗೆ ಮಂಜೂರಾತಿ ಪಡೆದುಕೊಂಡಿರುವುದಿಲ್ಲ. 2017-18ನೇ ಸಾಲಿನಲ್ಲಿ ಒಟ್ಟು 1162 ವಿಧವಾ ಮತ್ತು ವಿಕಲಚೇತನ ಫಲಾನುಭವಿಗಳನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಜಿಲ್ಲಾ ಸಮಿತಿಯಲ್ಲಿ ಆಯ್ಕೆ ಮಾಡಲಾಗಿದೆ.<br><br>ತಾಲ್ಲೂಕು/ಗ್ರಾಮ ಪಂಚಾಯತ್‌ವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| (ಆ) | ಮಂಜೂರಾತಿಯಾಗಿರುವ ಹಾಗೂ ಮಂಜೂರಾತಿಗಾಗಿ ಬಾಕಿ ಉಳಿದಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; ಬಾಕಿ ಉಳಿದಿರುವ ಫಲಾನುಭವಿಗಳಿಗೆ ಯಾವಾಗ ಮಂಜೂರು ಮಾಡಲಾಗುವುದು (ತಾಲ್ಲೂಕುವಾರು, ಗ್ರಾಮ ಪಂಚಾಯತ್‌ವಾರು ವಿವರ ನೀಡುವುದು). | ಈ ಫಲಾನುಭವಿಗಳ ಪೈಕಿ 282 ಫಲಾನುಭವಿಗಳಿಗೆ ಮನೆ ಮಂಜೂರಾತಿ ಕಾಮಗಾರಿ ಆದೇಶ ನೀಡಲಾಗಿದ್ದು, ಇನ್ನುಳಿದ 880 ಫಲಾನುಭವಿಗಳಿಗೆ ಕಾಮಗಾರಿ ಆದೇಶ ನೀಡುವ ಪ್ರಕ್ರಿಯೆ ಜಾರಿಯಲ್ಲಿದೆ.<br><br>ನಿವೇಶನರಹಿತ ಕುಟುಂಬಗಳಿಗೆ ನಿವೇಶನಸಹಿತ ವಸತಿ ಸೌಕರ್ಯ ಒದಗಿಸಲು ಸ್ಥಳೀಯವಾಗಿ ಲಭ್ಯವಿರುವ ಸರಕಾರಿ ಜಮೀನು ಮಂಜೂರು ಅಥವಾ ಸರಕಾರಿ ಜಮೀನು ಲಭ್ಯವಿಲ್ಲದ ಕಡೆಗಳಲ್ಲಿ ಖಾಸಗೀ ಜಮೀನುಗಳನ್ನು ಸರಕಾರ ನಿಗದಿಪಡಿಸಿದ ದರಗಳಲ್ಲಿ ಖರೀದಿಸಿ ಹಂತ ಹಂತವಾಗಿ ಹಂಚಿಕೆ ಮಾಡಲು ಕ್ರಮವಹಿಸಲಾಗುತ್ತಿದೆ.<br><br>ತಾಲ್ಲೂಕು/ಗ್ರಾಮ ಪಂಚಾಯತ್‌ವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| (ಇ) | ವಿವಿಧ ಯೋಜನೆಗಳಲ್ಲಿ ಮಂಜೂರಾದ ಮನೆಗಳು ಎಷ್ಟು; (ತಾಲ್ಲೂಕುವಾರು ಫಲಾನುಭವಿಗಳ ವಿವರ ನೀಡುವುದು) | 2015-16 ರಿಂದ2017-18ನೇ ಸಾಲಿನವರೆಗೆ ಮಂಡ್ಯ ಜಿಲ್ಲೆಗೆ ವಿವಿಧ ವಸತಿ ಯೋಜನೆಯಡಿ ಗ್ರಾಮೀಣ ಮತ್ತು ನಗರ ಪ್ರದೇಶಗಳಿಗೆ ಒಟ್ಟಾರೆಯಾಗಿ 43342 ಮನೆಗಳನ್ನು ಮಂಜೂರು ಮಾಡಲಾಗಿರುತ್ತದೆ. ಯೋಜನಾವಾರು ವಿವರ ಇಂತಿದೆ: |

| ಯೋಜನೆ | ಮಂಜೂರಾದ ಮನೆಗಳು | | | |
|---|---|---|---|---|
| | 2015-16 | 2016-17 | 2017-18 | ಒಟ್ಟು |
| ಬಸವ ವಸತಿ | 6862 | 7719 | 15484 | 30065 |
| ಡಾ.ಬಿ.ಆರ್.ಅಂಬೇಡ್ಕರ್ ನಿವಾಸ್ (ಗ್ರಾ) | 2020 | 2814 | 2339 | 7173 |
| ದೇವರಾಜ್ ಅರಸು-(ಗ್ರಾ&ನ) | 14 | 57 | 282 | 353 |
| ಪಿಎಂಎವೈ(ಜಿ) | 2566 | 1849 | 0 | 4415 |
| ವಾಜಪೇಯಿ ನಗರ | 506 | 142 | 264 | 912 |
| ಡಾ.ಬಿ.ಆರ್.ಅಂಬೇಡ್ಕರ್ ನಿವಾಸ್ (ನ) | 160 | 264 | 0 | 424 |
| ಒಟ್ಟು | 12128 | 12845 | 18369 | 43342 |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| | | ಫಲಾನುಭವಿಗಳವಾರು/ ತಾಲ್ಲೂಕುವಾರು/ಗ್ರಾಮ ಪಂಚಾಯತಿ/ಸ್ಥಳೀಯ ಸಂಸ್ಥೆವಾರು ವಿವರಗಳನ್ನು **ಅನುಬಂಧ-2**ರಲ್ಲಿ ಒದಗಿಸಿದೆ. |
| (ಈ) | ಮಂಡ್ಯ ಜಿಲ್ಲೆಯಲ್ಲಿ ಮಂಜೂರಾದ ಮನೆಗಳಿಗೆ ಬಿಡುಗಡೆಯಾದ ಅನುದಾನ, ಖರ್ಚಾದ ಅನುದಾನ ಎಷ್ಟು; ಬಾಕಿ ಉಳಿದಿರುವ ಅನುದಾನ ಎಷ್ಟು; | ಸರ್ಕಾರವು ಆಯವ್ಯಯದಲ್ಲಿ ಜಿಲ್ಲಾವಾರು ಅನುದಾನವನ್ನು ಬಿಡುಗಡೆ ಮಾಡದೇ ಒಟ್ಟಾರೆಯಾಗಿ ಬಿಡುಗಡೆ ಮಾಡಲಾಗುತ್ತಿದೆ. ನಿಗಮವು ಅನುದಾನವನ್ನು ಮನೆಗಳ ಜಿಪಿಎಸ್ ಆಧಾರಿತ ಪ್ರಗತಿಗೆ ಅನುಗುಣವಾಗಿ ನೇರವಾಗಿ ಫಲಾನುಭವಿಗಳ ಖಾತೆಗೆ ಬಿಡುಗಡೆ ಮಾಡಲಾಗುತ್ತಿದೆ.<br><br>2015-16 ರಿಂದ 2017-18ನೇ ಸಾಲಿನ ಅಂತ್ಯಕ್ಕೆ ವಿವಿಧ ವಸತಿ ಯೋಜನೆಯಡಿ ಮಂಡ್ಯ ಜಿಲ್ಲೆಗೆ ಸಂಬಂಧಿಸಿದಂತೆ ಒಟ್ಟು ರೂ.297.23 ಕೋಟಿಗಳನ್ನು ನೇರವಾಗಿ ಫಲಾನುಭವಿಗಳ ಖಾತೆಗೆ ಬಿಡುಗಡೆ ಮಾಡಲಾಗಿದ್ದು, ಅವುಗಳ ವಿವರ ಇಂತಿದೆ.<br><br>(ಕೋಟಿಗಳಲ್ಲಿ)<br>ವರ್ಷಗಳು: ಮೊತ್ತ<br>2015-16: 67.17<br>2016-17: 89.56<br>2017-18: 140.50<br>ಒಟ್ಟು: 297.23 |
| (ಉ) | ಮಂಜೂರಾದ ಮನೆಗಳಲ್ಲಿ ಪ್ರಾರಂಭವಾದ ವಿವಿಧ ಹಂತಗಳಲ್ಲಿ ಇರುವ ಅಥವಾ ಪ್ರಾರಂಭವಾಗದೇ ಇರುವ ಮನೆಗಳೆಷ್ಟು; ಮನೆಗಳು ಪ್ರಾರಂಭವಾಗದಿರಲು ಕಾರಣವೇನು; | ವಿವಿಧ ವಸತಿ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಅಂದರೆ 2015-16 ರಿಂದ 2017-18ರವರೆಗೆ ಮಂಜೂರಾದ 43342 ಮನೆಗಳ ಪೈಕಿ 14906 ಮನೆಗಳು ಪೂರ್ಣಗೊಂಡಿದ್ದು, 12985 ಮನೆಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತವೆ. ಬಾಕಿ ಉಳಿದಂತೆ 12027 ಮನೆಗಳು ಇನ್ನೂ ಪ್ರಾರಂಭಗೊಂಡಿರುವುದಿಲ್ಲ ಹಾಗೂ 3424 ಫಲಾನುಭವಿಗಳು ಅನೇಕ ಕಾರಣಾಂತರಗಳಿಂದ ರದ್ದುಗೊಂಡಿರುತ್ತವೆ.<br><br>ನಿಗಮದಿಂದ ಅನುಮೋದನೆಗೊಂಡ ಫಲಾನುಭವಿಗಳಿಗೆ ಕಾಮಗಾರಿ ಆದೇಶ ನೀಡಿದ ಮೂರು ತಿಂಗಳೊಳಗೆ ಮನೆಗಳನ್ನು ಪ್ರಾರಂಭಿಸಬೇಕಿರುತ್ತದೆ. ಆದರೆ ಕೆಲವು ಫಲಾನುಭವಿಗಳು ಮನೆ ನಿರ್ಮಿಸಿಕೊಳ್ಳುವಲ್ಲಿ ಆಸಕ್ತಿ ತೋರಿರುವುದಿಲ್ಲದಿಂತಹ ಫಲಾನುಭವಿಗಳಿಗೆ ಮನ ಒಲಿಸಿ ಕಾಮಗಾರಿ ಪ್ರಾರಂಭಿಸಲು ಕ್ರಮ ವಹಿಸಲಾಗುತ್ತಿದೆ. |
| (ಊ) | ಸುರಕ್ಷಿತವಾಗಿಲ್ಲದ ಮನೆಗಳು ಎಷ್ಟು; ಇವುಗಳನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; ಈ ಮನೆಗಳನ್ನು ಕಟ್ಟುವುದರಲ್ಲಿ ಆಗಿರುವ ಅಕ್ರಮಗಳ ಬಗ್ಗೆ ಹಾಗೂ ಸದರಿ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು? | ಈ ಕುರಿತು ನಿಗಮಕ್ಕೆ ಯಾವುದೇ ದೂರುಗಳು ಬಂದಿರುವುದಿಲ್ಲ.<br><br>ವಿವಿಧ ವಸತಿ ಯೋಜನೆಯಡಿ ಫಲಾನುಭವಿಗಳೇ ಸ್ವತಃ ಮನೆಗಳನ್ನು ನಿರ್ಮಿಸಿಕೊಳ್ಳಲು ಅವಕಾಶ ಕಲ್ಪಿಸಿರುವುದರಿಂದ, ತಮ್ಮ ಇಚ್ಛೆಯಂತೆ ಸದೃಢವಾದ ಮನೆಗಳನ್ನು ನಿರ್ಮಾಣ ಮಾಡಿಕೊಳ್ಳುತ್ತಿದ್ದಾರೆ. |

ಸಂಖ್ಯೆ: ವಇ 135 ಹೆಚ್‌ಎಎಂ 2018

(ಯು.ಟಿ.ಅಬ್ದುಲ್ ಖಾದರ್)
ವಸತಿ ಸಚಿವರು.